**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE - 560 003**

**ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆ – 2021**

**S.S.L.C SUPPLEMENTARY EXAMINATION – 2021**

# ಪತ್ರಿಕೆ / Paper – 02

**ವಿಷಯ : ಪ್ರಥಮ ಭಾಷೆ + ದ್ವಿತೀಯ ಭಾಷೆ + ತೃತೀಯ ಭಾಷೆ / ಎನ್.ಎಸ್.ಕ್ಯೂ.ಎಫ್**

**Subjects : First Language + Second Language + Third Language / NSQF**

## Key Answers

**ಉತ್ತರಗಳ ಸಂಕೇತ**

**ಸಂಕೇತ ಸಂಖ್ಯೆ : 33-K** **Code No. : 33-K**

**ಒಟ್ಟು ಪ್ರಶ್ನೆಗಳ ಸಂಖ್ಯೆ : 40+40+40=120]** **[Total No. of Questions : 40+40+40=120**

## ದ್ವಿತೀಯ ಭಾಷೆ ಕನ್ನಡ

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ/ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ನಿಮಗೆ ನೀಡಿರುವ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್ನಿನಿಂದ ಶೇಡ್ ಮಾಡಿರಿ.** **[40×1=40]**

**41) ಬೇಡನು ಬಿಟ್ಟ ಬಾಣದಿಂದ ತಪ್ಪಿಸಿಕೊಂಡ ಪ್ರಾಣಿ**

A) ಹುಲಿ B) ಸಿಂಹ

C) ಜಿಂಕೆ D) ಕರಡಿ

**ಉತ್ತರ :** (C) ಜಿಂಕೆ

**42) ಸುಖ ಸಂಪತ್ತಿನ ಕಾಲದಲ್ಲಿ ಜೊತೆಗಿದ್ದವರು ದುರ್ಭರ ಸಮಯದಲ್ಲಿ ಕೂಡ ಅವರ ಜೊತೆಗಿದ್ದು ಉಪಕಾರ ಸ್ಮರಣೆ ಮಾಡಬೇಕು ಎಂದು ಹೇಳಿದವರು**

A) ಬೇಡ B) ಗಿಳಿ

C) ಜಿಂಕೆ D) ಇಂದ್ರ

**ಉತ್ತರ :** (B) ಗಿಳಿ

**43) ಕೃಷಿ ಪ್ರಧಾನವಾದ ನಮ್ಮ ದೇಶದ ಬೆನ್ನೆಲುಬು**

A) ರೈತ  B) ಕಾರ್ಮಿಕ

C) ಉದ್ಯೋಗಿ  D) ನೌಕರ

**ಉತ್ತರ :** (A) ರೈತ

**44) ಪಂಡಿತಾರಾಧ್ಯ ಶಿವಾಚಾರ್ಯರು ಹೀಗೆಂದು ಖ್ಯಾತರಾಗಿದ್ದಾರೆ**

A) ವಿದ್ವಾಂಸ  B) ರೈತನಾಯಕ

C) ರಂಗಜಂಗಮ  D) ಪಂಡಿತ

**ಉತ್ತರ :** (C) ರಂಗಜಂಗಮ

**45) ನಮ್ಮ ಹಿರಿಯರ ಪ್ರಕಾರ ದೇಶದ ಪ್ರಗತಿ, ಜನರ ಉದ್ಧಾರ ಇವುಗಳನ್ನು ಅವಲಂಬಿಸಿದೆ**

A) ಅಣೆಕಟ್ಟುಗಳ ನಿರ್ಮಾಣ  B) ವಿದ್ಯುತ್ ಉತ್ಪಾದನೆ

C) ಅಸಿ, ಮಸಿ, ಕೃಷಿ  D) ವೈಜ್ಞಾನಿಕ ಬೆಳವಣಿಗೆ

**ಉತ್ತರ :** (C) ಅಸಿ, ಮಸಿ, ಕೃಷಿ

**46) ಪಂಡಿತ ಪುಟ್ಟರಾಜ ಗವಾಯಿಗಳಿಗೆ ದೊರೆತಿರುವ ಪ್ರಶಸ್ತಿ**

A) ಪದ್ಮಭೂಷಣ ಪ್ರಶಸ್ತಿ

B) ಜ್ಞಾನಪೀಠ ಪ್ರಶಸ್ತಿ

C) ಪಂಪ ಪ್ರಶಸ್ತಿ

D) ದ್ರೋಣಾಚಾರ್ಯ ಪ್ರಶಸ್ತಿ

**ಉತ್ತರ :** (A) ಪದ್ಮಭೂಷಣ ಪ್ರಶಸ್ತಿ

**47) ಪುಟ್ಟರಾಜರ ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಬೇಡಿಕೊಂಡಿದ್ದು**

A) ಮಗನನ್ನು ಶಾಲೆಗೆ ಕಳುಹಿಸಿ ಎಂದು

B) ಮಗನನ್ನು ಮನೆಗೆ ಕಳುಹಿಸಿ ಕೊಡಿ ಎಂದು

C) ಮಗನಿಗೆ ಸಂಗೀತ ಕಲಿಸಿ ಎಂದು

D) ಮಗನಿಗೆ ಸಹಾಯ ಮಾಡಿ ಎಂದು

**ಉತ್ತರ :** (B) ಮಗನನ್ನು ಮನೆಗೆ ಕಳುಹಿಸಿ ಕೊಡಿ ಎಂದು

**48) ಹಕ್ಕಿಗಳ ಗೂಡಿನಲ್ಲಿ ಕಲಾವಿದನ ಸ್ವೋಪಜ್ಞತೆ, ವಿಜ್ಞಾನಿಯ ತಂತ್ರಜ್ಞಾನ**

A) ಸಮಾರೋಪಗೊಂಡಿದೆ

B) ಬೇರ್ಪಡಿಸಿಕೊಂಡಿದೆ

C) ಸಂಕುಚಿತಗೊಂಡಿದೆ

D) ಸಮನ್ವಯಗೊಂಡಿದೆ

**ಉತ್ತರ :** (D) ಸಮನ್ವಯಗೊಂಡಿದೆ

**49) ಅಮೇರಿಕಾದ ಈ ಹಕ್ಕಿ ತನ್ನ ಗೂಡನ್ನು ಗಾಲ್ಫ್ ಚೆಂಡಿನಿಂದ ಅಲಂಕರಿಸುತ್ತದೆ**

A) ಗ್ಯಾನೆಟ್ ಹಕ್ಕಿ

B) ನೀಲಿ ಸಾಮ್ರಾಟ

C) ಸಗ್ಗದ ಹಕ್ಕಿ

D) ಗೀಜುಗನ ಹಕ್ಕಿ

**ಉತ್ತರ :** (A) ಗ್ಯಾನೆಟ್ ಹಕ್ಕಿ

**50) ಇದು ಗೋಪಾಲನ ಗೆಳೆಯರ ಹೆಸರಲ್ಲ**

A) ನಾಣಿ

B) ಮಾಧು

C) ರಾಮು

D) ರಾಜು

**ಉತ್ತರ :** (D) ರಾಜು

**51) ಗೋಪಾಲನ ಬೇಡಿಕೆಯಂತೆ ಅವನ ತಾಯಿಯು ಕೊಡಿಸಿದ ಬಟ್ಟೆ ಯಾವುದೆಂದರೆ**

A) ಕೋಟು

B) ಅಂಗಿ

C) ರುಮಾಲು

D) ಪಂಚೆ

**ಉತ್ತರ :** (D) ಪಂಚೆ

52) **‘ಏಣಿ’ ಕವಿತೆಯು ಪ್ರತಿಪಾದಿಸುವ ಮೌಲ್ಯ ಇದು**

A) ನಮ್ಮ ಏಳಿಗೆಗೆ ಕಾರಣರಾದವರನ್ನು ಗೌರವಿಸಬೇಕು

B) ಅಟ್ಟ ಹತ್ತಿದ ಮೇಲೆ ಏಣಿಯನ್ನು ಬಿಸಾಡಬೇಕು

C) ಅಧಿಕಾರ ಅಂತಸ್ತು ಮುಖ್ಯವೆಂದು ತಿಳಿಯಬೇಕು

D) ಹಣದಿಂದ ಎಲ್ಲವನ್ನು ಕೊಂಡುಕೊಳ್ಳಲು ಸಾಧ್ಯ

**ಉತ್ತರ :** (A) ನಮ್ಮ ಏಳಿಗೆಗೆ ಕಾರಣರಾದವರನ್ನು ಗೌರವಿಸಬೇಕು

53) **ಕಾಡಿನಿಂದ ಎದ್ದ ಸಿದ್ಧಾರ್ಥನು ಹೊರಟದ್ದು**

A) ಯುದ್ಧಕ್ಕೆ B) ಮನೆಗೆ

C) ನಾಡಿಗೆ D) ಸೈನ್ಯಕ್ಕೆ

**ಉತ್ತರ :** (C) ನಾಡಿಗೆ

54) **ಸಿದ್ಧಾರ್ಥನು ಬುದ್ಧನಾದ ಪರಿ ಇದು**

A) ತಾನು ರಾಜ್ಯಗಳನ್ನು ಗೆದ್ದ ಕಥೆಯಾಗಿದೆ

B) ತನ್ನ ಅರಮನೆಯ ಮೋಹದ ಕಥೆಯಾಗಿದೆ

C) ಯುದ್ಧ ಬಿಟ್ಟು ಪ್ರೀತಿ ಕೊಟ್ಟ ಕಥೆಯಾಗಿದೆ

D) ತನ್ನ ವೈಭವದ ವರ್ಣನೆಯ ಕಥೆಯಾಗಿದೆ

**ಉತ್ತರ :** (C) ಯುದ್ಧ ಬಿಟ್ಟು ಪ್ರೀತಿ ಕೊಟ್ಟ ಕಥೆಯಾಗಿದೆ

55) **ಸಿದ್ಧಾರ್ಥನು ಈ ಮರದ ಕೆಳಗೆ ಕುಳಿತು ತಪಸ್ಸು ಮಾಡಿದನು**

A) ಅಶೋಕ ವೃಕ್ಷ B) ಶಮೀವೃಕ್ಷ

C) ಹಲಸಿನ ವೃಕ್ಷ D) ಬೋಧಿ ವೃಕ್ಷ

**ಉತ್ತರ :** (D) ಬೋಧಿ ವೃಕ್ಷ

56) **ತಟ್ಟೆಯಲ್ಲಿ ಕರ್ಪೂರ ಹೀಗೆ ಕರಗುತ್ತದೆ**

A) ಕೋಪದಿಂದ B) ತಾಪದಿಂದ

C) ನಿಧಾನವಾಗಿ D) ಮೌನವಾಗಿ

**ಉತ್ತರ :** (D) ಮೌನವಾಗಿ

**57) ಕೂಗಾಡಿ ಹಾರಾಡುವುದಕ್ಕಿಂತ ಹೀಗೆ ಬದುಕಬೇಕೆಂದು ಕವಿ 'ಸದ್ದು ಮಾಡದಿರು' ಪದ್ಯದಲ್ಲಿ ಹೇಳಿದ್ದಾರೆ**

A) ಶಾಂತಿಯಿಂದ ಬದುಕುವುದು B) ಸಿಡುಕು ಮಾಡುವುದು

C) ದರ್ಪದಿಂದ ಬದುಕುವುದು D) ಅಧಿಕಾರ ಚಲಾಯಿಸುವುದು

**ಉತ್ತರ :** (A) ಶಾಂತಿಯಿಂದ ಬದುಕುವುದು

**58) 'ಸದ್ದು ಮಾಡದಿರು' ಕವಿತೆಯ ಆಕರ ಕೃತಿ**

A) 'ತಾರಾಸಖ' B) 'ಕಾವ್ಯಾರಾಧನ'

C) 'ಕನ್ನಡ ರತ್ನಾವಳಿ' D) 'ಬೊಗಸೆ'

**ಉತ್ತರ :** (D) 'ಬೊಗಸೆ'

**59) ನಾವು ನರನಲ್ಲಿ ಈ ರೂಪವನ್ನು ಕಾಣಬೇಕೆಂದು ಕವಿ ಗೋಪಾಲ ಕೃಷ್ಣ ಅಡಿಗರು ಹೇಳಿದ್ದಾರೆ**

A) ಮನುಜ B) ನಾರಾಯಣ

C) ವಾನರ D) ನಾರದ

**ಉತ್ತರ :** (B) ನಾರಾಯಣ

**60) 'ಗುರಿ' ಪದ್ಯದಲ್ಲಿ ಕವಿ ಅಡಿಗರ ಪ್ರಕಾರ ಕೆಸರಿನಲ್ಲಿರುವ ಕಮಲ ನೋಡುವುದು**

A) ಬಾಂದಳವನ್ನು

B) ನೀರನ್ನು

C) ನೆಲವನ್ನು

D) ನದಿಯನ್ನು

**ಉತ್ತರ :** (A) ಬಾಂದಳವನ್ನು

**61) ಕುಣಿಗಲ್ ಕೆರೆ ಹೀಗೆ ಬಾಗಿದೆ**

A) ಬಾಳೆ ಹಣ್ಣಿನಂತೆ

B) ನಿಂಬೆಯ ಹಣ್ಣಿನಂತೆ

C) ಸೀಬೆ ಹಣ್ಣಿನಂತೆ

D) ಮಾವಿನ ಹಣ್ಣಿನಂತೆ

**ಉತ್ತರ :** (A) ಬಾಳೆ ಹಣ್ಣಿನಂತೆ

**62) ಮೂಡಲ್ ಕುಣಿಗಲ್ ಕೆರೆಯ ಅಂದವನ್ನು ನೋಡಲು ಬಂದವರು**

A) ಚಂದ್ರ

B) ಇಂದ್ರ

C) ಶಿವ

D) ಬ್ರಹ್ಮ

**ಉತ್ತರ :** (C) ಶಿವ

**63) ಬಸವಣ್ಣನವರ ವಚನಗಳ ಅಂಕಿತನಾಮ**

A) ಚೆನ್ನಮಲ್ಲಿಕಾರ್ಜುನ

B) ಕಪಿಲಸಿದ್ಧಮಲ್ಲಿಕಾರ್ಜುನ

C) ಕೂಡಲ ಸಂಗಮದೇವ

D) ಗುಹೇಶ್ವರ

**ಉತ್ತರ :** (C) ಕೂಡಲ ಸಂಗಮದೇವ

**64) ಸೊನ್ನಲಿಗೆಯ ಸಿದ್ಧರಾಮರ ಪ್ರಕಾರ ಇದನ್ನು ಸುಮ್ಮನೆ ಓದಿ ಫಲವಿಲ್ಲ**

A) ಪುಸ್ತಕಗಳು

B) ವೇದಾಂತ

C) ಸಿದ್ಧಾಂತ

D) ಪುರಾಣ

**ಉತ್ತರ :** (B) ವೇದಾಂತ

**65) ಧುರಕ್ಕೆ ಬೆನ್ನು ಹಾಕಿದರೆ ಪ್ರಾಪ್ತಿಯಾಗುವುದು**

A) ಸ್ವರ್ಗ B) ನರಕ

C) ದೇವಲೋಕ D) ಸದ್ಗತಿ

**ಉತ್ತರ :** (B) ನರಕ

**66) ಇಂದ್ರ ಪದವಿ ನನಗೆ ಬೇಕಿಲ್ಲ ಎಂದು ಹೇಳಿದವನು**

A) ಉತ್ತರ

B) ಇಂದ್ರ

C) ನಾರಿಯರು

D) ಅರ್ಜುನ

**ಉತ್ತರ :** (A) ಉತ್ತರ

**67) ಹಾವಿನಂತಹ ದುಷ್ಟ ಜಂತುವು ಕೆಣಕದೆ ಯಾರನ್ನೂ ಹಿಂಸಿಸದು ಎಂಬ ಯೋಚನೆ ಬಂದದ್ದು**

A) ಬೇಡರಿಗೆ

B) ರತ್ನಳಿಗೆ

C) ವೈದ್ಯರಿಗೆ

D) ಭೀಮನಾಯಕನಿಗೆ

**ಉತ್ತರ :** (C) ವೈದ್ಯರಿಗೆ

**68) ವೈದ್ಯರ ಬಳಿ ತನ್ನ ಮಗುವನ್ನು ಬದುಕಿಸಿಕೊಡಿ ಎಂದು ಬೇಡಿಕೊಂಡವರು**

A) ರತ್ನ

B) ಭೀಮನಾಯಕ

C) ಮಗ

D) ಗುರುಗಳು

**ಉತ್ತರ :** (B) ಭೀಮನಾಯಕ

**69) 'ಶಾಲೆಯಲ್ಲಿ' ಪದದಲ್ಲಿರುವ ವಿಭಕ್ತಿ ಪ್ರತ್ಯಯ**

A) ಇಂದ B) ಅನ್ನು

C) ಉ D) ಅಲ್ಲಿ

**ಉತ್ತರ :** (D) ಅಲ್ಲಿ

**70) ಲೋಪಸಂಧಿಗೆ ಉದಾಹರಣೆಯಾದ ಪದ**

A) ಅತ್ಯಂತ B) ಇನ್ನೊಂದು

C) ವಿದ್ಯಾರ್ಥಿ D) ಆಶ್ರಯದಾಣ

**ಉತ್ತರ :** (B) ಇನ್ನೊಂದು

**71) 'ಕಡಲು' ಪದ ನೀಡುವ ಅರ್ಥ**

A) ಕಾಡು B) ಗುಂಪು

C) ಕಾಂತಿ D) ಸಮುದ್ರ

**ಉತ್ತರ :** (D) ಸಮುದ್ರ

**72) "ಕೌರವರ ಸೇನೆಯು ಸಾಗರದಂತೆ ಕಾಣಿಸುತ್ತಿತ್ತು". ಇಲ್ಲಿರುವ ಅಲಂಕಾರ**

A) ರೂಪಕಾಲಂಕಾರ

B) ಉಪಮಾಲಂಕಾರ

C) ದೃಷ್ಟಾಂತಾಲಂಕಾರ

D) ಉತ್ಪ್ರೇಕ್ಷಾಲಂಕಾರ

**ಉತ್ತರ :** (B) ಉಪಮಾಲಂಕಾರ

**73) 'ಕೆರೆಯಾಗೆ' ಪದದ ಗ್ರಾಂಥಿಕ ರೂಪ**

A) ಕೆರೆಗೆ

B) ಕೆರೆಯಲ್ಲಿ

C) ಕೆರೆಯು

D) ಕೆರೆಯನ್ನು

**ಉತ್ತರ :** (B) ಕೆರೆಯಲ್ಲಿ

**74) 'ಸಾಗರ' ಪದದಲ್ಲಿರುವ ಮಾತ್ರೆಗಳ ಸಂಖ್ಯೆ**

A) ಮೂರು ಮಾತ್ರೆ

B) ಐದು ಮಾತ್ರೆ

C) ಆರು ಮಾತ್ರೆ

D) ನಾಲ್ಕು ಮಾತ್ರೆ

**ಉತ್ತರ :** (D) ನಾಲ್ಕು ಮಾತ್ರೆ

**75) 'ಅರಮನೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ**

A) ತತ್ಪುರುಷ ಸಮಾಸ

B) ದ್ವಿಗು ಸಮಾಸ

C) ಕರ್ಮಧಾರಯ ಸಮಾಸ

D) ದ್ವಂದ್ವ ಸಮಾಸ

**ಉತ್ತರ :** (A) ತತ್ಪುರುಷ ಸಮಾಸ

**76) 'ಪಕ್ಷಿ' ಪದದ ತದ್ಭವ ರೂಪ**

A) ಅಕ್ಷಿ

B) ಖಗ

C) ಅಕ್ಕಿ

D) ಹಕ್ಕಿ

**ಉತ್ತರ :** (D) ಹಕ್ಕಿ

**77) 'ನದಿ' ಪದವು ನಾಮಪದದ ಈ ಪ್ರಕಾರಕ್ಕೆ ಸೇರಿದೆ**

A) ರೂಢನಾಮ

B) ಸರ್ವನಾಮ

C) ಅಂಕಿತನಾಮ

D) ಅನ್ವರ್ಥನಾಮ

**ಉತ್ತರ :** (A) ರೂಢನಾಮ

**78) 'ರಮೇಶನು ಹಣ್ಣನ್ನು ತಿಂದನು' ಇದು ಈ ವ್ಯಾಕರಣಾಂಶಕ್ಕೆ ಸೇರಿದೆ**

A) ವರ್ತಮಾನ ಕಾಲ

B) ಭೂತ ಕಾಲ

C) ಭವಿಷ್ಯತ್ ಕಾಲ

D) ಸಕಾಲ

**ಉತ್ತರ :** (B) ಭೂತ ಕಾಲ

**79) ತಂದೆಗೆ ಪತ್ರ ಬರೆಯುವಾಗ ಬಳಸುವ ಪ್ರಾರಂಭದ ಸಂಬೋಧನೆ**

A) ಮಾನ್ಯರೇ

B) ಮಾತೃಶ್ರೀ

C) ತೀರ್ಥರೂಪ

D) ಚಿರಂಜೀವಿ

**ಉತ್ತರ :** (C) ತೀರ್ಥರೂಪ

**80) ಹಾಸಿಗೆ ಇದ್ದಷ್ಟು _ ಈ ಗಾದೆಯ ಮುಂದಿನ ಭಾಗ**

A) ಮನ ಬಂದಂತೆ ನಡೆ

B) ದಾರಿ ಹುಡುಕು

C) ಕಾಲು ಚಾಚು

D) ಕೈ ಚಾಚು

**ಉತ್ತರ :** (C) ಕಾಲು ಚಾಚು